International Journal of Kannada Research 2025; 11(3): 157-162




International Journal of Kannada Research
www.kannadajournal.com

**ISSN: 2454–5813**
IJKR 2025; 11(3): 157-162
© 2025 IJKR
www.kannadajournal.com
Received: 12-05-2025
Accepted: 16-06-2025

**ಪಲ್ಲವಿ ಎಸ್ ಎನ್**
ಸಂಶೋಧಕಿ, ಆದಿಚುಂಚನಗಿರಿ ವಿಶ್ವವಿದ್ಯಾಲಯ, ಕರ್ನಾಟಕ, ಭಾರತ

**ಡಾ. ಶ್ವೇತಾರಾಣಿ ಹೆಚ್**
ಸಹಪ್ರಾಧ್ಯಾಪಕಿ, ಆದಿಚುಂಚನಗಿರಿ ವಿಶ್ವವಿದ್ಯಾಲಯ, ಕರ್ನಾಟಕ, ಭಾರತ

**Corresponding Author:**
**ಪಲ್ಲವಿ ಎಸ್ ಎನ್**
ಸಂಶೋಧಕಿ, ಆದಿಚುಂಚನಗಿರಿ ವಿಶ್ವವಿದ್ಯಾಲಯ, ಕರ್ನಾಟಕ, ಭಾರತ

# ಭೈರವನ ಸೃಷ್ಟಿಯ ಪೌರಾಣಿಕ ಹಿನ್ನೆಲೆ

**ಪಲ್ಲವಿ ಎಸ್ ಎನ್, ಶ್ವೇತಾರಾಣಿ ಹೆಚ್**

**ಪೀಠಿಕೆ**

ಸಾಂಸ್ಕೃತಿಕ ನೆಲೆಗಟ್ಟಿನ ಹುಡುಕಾಟದಲ್ಲಿ ಮನುಷ್ಯ ಮೊದಲು ಅನ್ವೇಷಿಸಿಕೊಂಡಿದ್ದು ಪುರಾಣಗಳನ್ನು. ಪ್ರಕೃತಿಯ ವಿಕೋಪವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿ ಹೊಸ ನಂಬಿಕೆಗಳು ಸೃಷ್ಟಿಯಾದವು. ನಂಬಿಕೆಗಳೆ ಮುಂದೆ ಪುರಾಣಗಳಾಗಿ ವಿಕಾಸವಾದವು. ಪುರಾಣ ಎಂಬ ಪದವು ಗ್ರೀಕ್ ನ “ಮಿಥೋಸ್” ಎಂಬ ಪದದಿಂದ ಬಂದಿದೆ.೧( ಪ್ರೊ. ಕೆ.ಎನ್ ಗಂಗಾನಾಯಕ್ ಪ್ರಧಾನ ಸಂಪಾದಕರು, ಜಯಲಕ್ಷ್ಮಿ ಸೀತಾಪುರ, ಸಂಪಾದಕರು, ಕನ್ನಡ ಜಾನಪದ, ಪುಟ ಸಂಖ್ಯೆ 84). ಹ್ಯಾಂಕೊ ಲೋರಿ “ ದ ಪ್ರಾಬ್ಲಮ್ಸ್ ಆಫ್ ಡಿಫೈನಿಂಗ್ ಮಿಥ್ “ ಎಂಬ ಪುಸ್ತಕದಲ್ಲಿ ಮಿಥ್ ಎಂದರೆ ಪೌರಾಣಿಕ ಕಥೆ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಪುರಾಣವೆಂದರೆ ಒಂದು ನಿರ್ದಿಷ್ಟ ಸಂಸ್ಕೃತಿಯವರು ವಿಶ್ವ ದೃಷ್ಟಿಕೋನದ ಮೂಲವನ್ನು ಅನ್ವೇಷಿಸುವ ಕಾಲ್ಪನಿಕ ಕಥೆಗಳಾಗಿವೆ. ಮಾನವನ ಸೃಷ್ಟಿ ಹಾಗೆಯೇ ಜಗತ್ತಿನ ಸೃಷ್ಟಿಯ ಒಂದು ನಿರ್ದಿಷ್ಟ ಧಾರ್ಮಿಕ ನಂಬಿಕೆಯ ತಾತ್ವಿಕ ನೆಲಗಟ್ಟನ್ನು ರೂಪಿಸುವುದೇ ಪುರಾಣಗಳಾಗಿವೆ.

'ಆರ್ ಆರ್ ಮಾರೆಟ್' ಅವರು ಹೇಳುವಂತೆ “ಪುರಾಣಗಳ ಕೆಲಸ ಕುತೂಹಲವನ್ನು ತೃಪ್ತಿಪಡಿಸುವುದಲ್ಲ, ನಂಬಿಕೆ ಸ್ಥಿರಪಡಿಸುವುದಾಗಿದೆ”.2(ಕನ್ನಡ ಜಾನಪದ ಪುಟ ಸಂಖ್ಯೆ 85) ಇವರು ಹೇಳುವಂತೆ ಪುರಾಣಗಳು ಹಿಂದೆ ನಡೆದಿರುವ ಸಂಗತಿಗಳನ್ನು ನಂಬಿಕೆಯ ನೆಲಗಟ್ಟಿನಲ್ಲಿ ಕಟ್ಟಿಕೊಡುವ ಕೆಲಸ ಮಾಡುತ್ತವೆ ಎಂದು ತಿಳಿಸಿದ್ದಾರೆ. ಪುರಾಣಗಳು ಧಾರ್ಮಿಕ ನಂಬಿಕೆ, ಅಸ್ತಿತ್ವ , ಪ್ರಕೃತಿ ಸಿದ್ಧಾಂತಗಳಿಗೆ ಸಂಬಂಧಿಸಿದ ತಾತ್ವಿಕ ಪ್ರಶ್ನೆಗಳಿಗೆ ಉತ್ತರವಾಗಿ ಮೂಡಿಬಂದಿವೆ. ಪುರಾಣಗಳು ಹೆಚ್ಚಾಗಿ ಅಸ್ತಿತ್ವವಾದದ ಪರಿಕಲ್ಪನೆಗಳು ಮತ್ತು ಮೂಲ ಕಥೆಗಳ ಮೇಲೆ ಕೇಂದ್ರೀಕರಿಸುತ್ತಾ ಧಾರ್ಮಿಕ ನಂಬಿಕೆಗಳನ್ನು ಬಲಪಡಿಸುತ್ತವೆ. ದೇವರು, ಧರ್ಮಗಳ ಅಸ್ತಿತ್ವದ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಜಿಜ್ಞಾಸೆಯ ಮೂಲವೇ ಪುರಾಣಗಳಾಗಿವೆ.

ಜನಪದ ಕಥೆಗಳನ್ನು ಅವಲೋಕಿಸುತ್ತ ಸಾಗಿದಾಗ ಪುರಾಣಗಳ ಜೊತೆಯಲ್ಲಿಯೇ ಐತಿಹ್ಯದ ಛಾಯೆಗಳು ಬಿಚ್ಚಿಕೊಳ್ಳುತ್ತವೆ. ಐತಿಹ್ಯಗಳು ಸಾಧು-ಸಂತರ ಜೀವನಗಳನ್ನು ಪವಾಡದ ರೀತಿಯಲ್ಲಿ ಚಿತ್ರಿಸುವ ಕೆಲಸ ಮಾಡುತ್ತವೆ. ಐತಿಹ್ಯಗಳಲ್ಲಿ ವಿವರಣಾತ್ಮಕ ಐತಿಹ್ಯಗಳು, ಅತಿ ಮಾನುಷವ್ಯಕ್ತಿಗಳನ್ನು ಕುರಿತ ಐತಿಹ್ಯಗಳು ಮತ್ತು ಚಾರಿತ್ರಿಕ ಆಭಾಸದ ಐತಿಹ್ಯಗಳು ಎಂಬ ಮೂರು ವಿಭಾಗಗಳಿವೆ 2( ಕನ್ನಡ ಜಾನಪದ ಪುಟ ಸಂಖ್ಯೆ 85.) ಐತಿಹ್ಯಗಳು ಘಟನೆ ನಡೆದ ಸ್ಥಳ, ಕಾಲಕ್ಕೆ ಸಂಬಂಧಿಸಿದಂತೆ ಕಥೆಯ ಮೂಲಕ ನಿರೂಪಿಸುತ್ತಾ ಅವುಗಳ ಬಗ್ಗೆ ಸ್ಪಷ್ಟ ಕಲ್ಪನೆಯನ್ನು ಮೂಡಿಸುತ್ತವೆ. ಐತಿಹ್ಯ ಎಂಬ ಪದವು ‘Legenda’ (ಲೆಜೆಂಡ್) ಎಂಬ ಪದದಿಂದ ಬಂದಿದೆ. ಈ ಪದವು ಸೃಷ್ಟಿ ಹಾಗು ಆರಂಭದ ಕುರಿತಾದ ವಿವರಣಾತ್ಮಕ ಕಥೆಗಳು ಎಂಬ ಅರ್ಥವಿದೆ. 'ಸ್ಮಿತ್ ಥಾಂಸನ್' ಅವರು ವಾಕ್ ಸಂಪ್ರದಾಯದ ಕಥೆಗಳನ್ನು ವಿಂಗಡಿಸುವಾಗ ಐತಿಹ್ಯಗಳನ್ನು ಕಥೆಯ ಒಂದು ವರ್ಗೀಕರಣವಾಗಿ ಮಾಡಿ ಸ್ಥಳ ಐತಿಹ್ಯ, ವ್ಯಕ್ತಿ ಐತಿಹ್ಯ, ಕಾರ್ಯಕಾರಣ ಕಥೆಗಳು, ಕಿನ್ನರ ಕಥೆಗಳು, ಘಟನಾ ಐತಿಹ್ಯ ಎಂಬುದಾಗಿ ವಿಂಗಡಿಸಿದ್ದಾರೆ.3( ಡಾ. ಹಾ ಮಾ ನಾಯಕ್, ಜಾನಪದ ಸ್ವರೂಪ ಪುಟ ಸಂಖ್ಯೆ 18). ಪುರಾಣ ಮತ್ತು ಐತಿಹ್ಯ ನಿರ್ದಿಷ್ಟವಾಗಿ ವಿಂಗಡಿಸಲಾಗುವುದಿಲ್ಲ. ಕ್ರಮವಾಗಿ ಇವೆರಡು ನಡುವೆ ಒಂದನ್ನೊಂದು ಸಮರ್ಥಿಸುವ ಕೆಲಸ ನಡೆದಿದೆ. ಒಂದನ್ನು ಬಿಡಿಸಿದರೆ ಕಥೆಯ ಹಂದರವು ತಿಳಿಯದಂತೆ ಬೆಸೆದುಕೊಂಡಿದೆ. ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಪುರಾಣ ದೈವದ ನಿರೂಪಣೆಯಾದರೆ, ಐತಿಹ್ಯವು ಸ್ಥಳ,ಕಾಲ,ವ್ಯಕ್ತಿ ಸಂಗತಿಗಳ ಕುರಿತಾದ ನಿರೂಪಣೆಯಾಗಿದೆ. ದೈವತ್ವದ ನಂಬಿಕೆ ಇರುವ ಮಾನವನು ಸೃಷ್ಟಿ, ಸ್ಥಿತಿ, ಲಯಕಾರರು ಎಂದೆ ನಂಬಲಾದ ಬ್ರಹ್ಮ ,ವಿಷ್ಣು, ಮಹೇಶ್ವರ ಇವರುಗಳ ಬಗ್ಗೆ ಅನೇಕ ಕಥೆಗಳನ್ನು ನಿರೂಪಿಸುತ್ತಾ ಬಂದಿದ್ದಾರೆ.

ಶಿವನ ಆರಾಧನೆಯು ಸಿಂಧೂ ನಾಗರಿಕತೆಯಿಂದಲೇ ಆರಂಭವಾಯಿತು ಎಂಬುದಾಗಿ ಹೇಳಲಾಗುತ್ತದೆ. ಪಶುಪತಿ ಆರಾಧನೆಯೊಂದಿಗೆ ಶಿವನನ್ನು ನಾನಾವತಾರಗಳೊಂದಿಗೆ ಆರಾಧಿಸುವ ಪರಂಪರೆ ಜಾಗೃತವಾಯಿತು. ಋಗ್ವೇದದಲ್ಲಿಯೂ ಶಿವನನ್ನು ರುದ್ರನೆಂದು ಉಲ್ಲೇಖಿಸಲಾಗಿದೆ.5 ( ಋಗ್ವೇದ ಸಂಹಿತಾ ಪುಸ್ತಕ, ಋಗ್ವೇದ ೧.೧೪, ೨.೩೩ ಮತ್ತು ೭.೪೬)ಶೈವ ಧರ್ಮವು ಬಹು ಪ್ರಾಚೀನವಾದ ಧರ್ಮವಾಗಿದೆ. ಶಿವನ ಆರಾಧಕರಾದ ಇವರನ್ನು ಶೈವರೆಂದು ಗುರುತಿಸಲಾಗಿದೆ. ಶಿವನ ಅವತಾರಗಳನ್ನು ವೈವಿಧ್ಯಮಯವಾಗಿ ಚಿತ್ರಿಸಿ ಆರಾಧಿಸುವ ಪರಂಪರೆಯು ಆರಂಭವಾದಂತೆ ಅನೇಕ ಪಂಥಗಳು ಉದಯವಾದವು. ಹಾಗೆ ಉದಯವಾದ ಪಂಥವೇ ನಾಥಪಂಥ. ಸುಮಾರು 9 ಮತ್ತು 10ನೇ ಶತಮಾನದಲ್ಲಿ ಆರಂಭವಾದ ಈ ಪಂಥವು ಶಿವನ ದುಷ್ಟ ಸಂಹಾರಕ ರೂಪವಾದ ಭೈರವನ ರೂಪವನ್ನು ಆರಾಧಿಸಲು ಆರಂಭಿಸಿದರು. ಶಿವನ ಅಂಶದಿಂದ ಜನಿಸಿದ ಭೈರವನ ಸೃಷ್ಟಿಯ ಬಗ್ಗೆ ಅನೇಕ ಪುರಾಣ ಸಂಗತಿಗಳನ್ನು ಹೆಣೆಯಲಾಗಿದೆ. ಆ ಕಥೆಗಳ ನಿರೂಪಣೆಯೇ ಈ ಲೇಖನದ ಉದ್ದೇಶವಾಗಿದೆ.

ಭೈರವನ ಸೃಷ್ಟಿಯ ಬಗ್ಗೆ ಶಿವಪುರಾಣ, ಶಂಕರ ಸಂಹಿತೆ, ಶಿವ ರಹಸ್ಯ ಮತ್ತು ಸ್ಕಂದಪುರಾಣ, ಕಾಶಿ ಖಂಡ ಮಹಾತ್ಮೆ, ಕಾಳಿಕಾ ಪುರಾಣ, ಭವಿಷ್ಯ ಮಹಾಪುರಾಣ, ವಾಮನ ಪುರಾಣ, ಚುಂಚನಗಿರಿಯ ಪುರಾಣ ಈ ಎಲ್ಲಾ ಪುರಾಣಗಳಲ್ಲಿಯೂ ಇರುವ ಒಂದೇ ಸಾಮಾನ್ಯ ಅಂಶ ಬ್ರಹ್ಮನ ಅಹಂಕಾರದ ವರ್ತನೆಯು ಭೈರವನ ಜನನಕ್ಕೆ ಕಾರಣವಾಯಿತು. “ತ್ರಿಮೂರ್ತಿಗಳಲ್ಲಿ ಯಾರು ಶ್ರೇಷ್ಠರು?” ಎಂಬ ಜಿಜ್ಞಾಸೆ ಮೂಡಿದಾಗ, ಪರಶಿವನು ಬ್ರಹ್ಮನ ಗರ್ವವನ್ನು ಮುರಿದುದರಿಂದ ಜಗತ್ತಿನಲ್ಲಿ ಸರ್ವ ಶ್ರೇಷ್ಠ ದೇವತೆಯಾಗುತ್ತಾನೆ. ಆ ಸಂದರ್ಭದಲ್ಲಿ ಶಿವನ ಅಂಶದಿಂದ ಜನಿಸಿದ ಭೈರವನು ವಿಶೇಷಸ್ಥಾನ ಹೊಂದಿದ್ದಾನೆ. ಬ್ರಹ್ಮ ವಿಷ್ಣುವಿನ ಕದನದಿಂದ ಜಗತ್ತು ವಿನಾಶವಾಗುತ್ತದೆ ಎಂಬುದನ್ನು ಅರಿತ ಶಿವನು ಅಗ್ನಿ ಸ್ತಂಭವಾಗಿ ಬೆಳಗಿ ಅಂಧಕಾರ ತೊಡೆದು ಹಾಕುವುದರ ಸಂಕೇತವಾಗಿದೆ. ಕಥೆಯ ನಿರೂಪಣೆಯಲ್ಲಿ ಕೆಲವೊಂದು ವ್ಯತ್ಯಾಸಗಳನ್ನು ಮಾಡಿಕೊಳ್ಳಲಾಗಿದೆ. ಪುರಾಣಗಳಲ್ಲಿ ಚಿತ್ರತವಾಗಿರುವ ಭೈರವನ ಜನನದ ಬಗ್ಗೆ ಮುಂದಿನಂತೆ ಅವಲೋಕಿಸಬಹುದು.

**ಶಿವ ಪುರಾಣ**

ಶಿವ ಪುರಾಣದಲ್ಲಿ ವ್ಯಕ್ತವಾಗಿರುವ ಕಥೆ ಹೀಗಿದೆ ಬಹಳ ಹಿಂದೆ ಬ್ರಹ್ಮ ಮತ್ತು ವಿಷ್ಣುವಿನ ನಡುವೆ ಶ್ರೇಷ್ಠತೆಯ ಬಗ್ಗೆ ವಾಗ್ವಾದಗಳು ಪ್ರಾರಂಭವಾದವು. ಮಾತಿನಿಂದ ಆರಂಭವಾದದ್ದು ಕದನ ರೂಪವನ್ನು ಪಡೆಯಿತು. ‘ಯಾರು ಶ್ರೇಷ್ಠರು?’ ಎಂಬ ಪ್ರಶ್ನೆಗೆ ಇಬ್ಬರು ಅಸ್ತ್ರಗಳ ಪ್ರಯೋಗಕ್ಕೆ ಸಿದ್ಧರಾಗುವರು. ಸನ್ನಿವೇಶದ ವಿಷಮತೆಯನ್ನು ಅರಿತ ಶಿವ ಅಗ್ನಿ ಸ್ತಂಭವಾಗಿ ರೂಪುಗೊಂಡನು. ಅಗ್ನಿ ಸ್ತಂಭದ ಉದಯದ ನಂತರ ಸ್ತಂಭದ ಅಂತ್ಯವನ್ನು ಕಂಡವರು ಶ್ರೇಷ್ಠರು ಎಂದು ನಿರ್ಣಯಿಸಲಾಗುವುದು ಎಂದು ಪಂದ್ಯ ಕಟ್ಟಿಕೊಂಡಿರು. ಸ್ತಂಭದ ತಳಭಾಗದ ಅಂತ್ಯವನ್ನು ಹುಡುಕಲು ಹೊರಟ ವಿಷ್ಣು ವರಹ ರೂಪದಿಂದ ಅನೇಕ ವರ್ಷಗಳ ಕಾಲ ಹುಡುಕಿದರೂ ಸ್ತಂಭದ ಅಂತ್ಯ ಕಾಣದೆ ಮತ್ತೆ ಯುದ್ಧ ಭೂಮಿಗೆ ಬರುವುದು ವಿಷ್ಣುವಿನ ಪ್ರಾಮಾಣಿಕತೆಯ ಧ್ಯೋತಕವಾಗಿದೆ. ಅಹಂಕಾರದಿಂದ ಚಿತ್ತಕ್ಕೆ ಕಾರ್ಮೋಡ ಕವಿದಿದ್ದ ಬ್ರಹ್ಮ ಸ್ತಂಭದ ಮೇಲ್ಭಾಗವನ್ನು ಕಾಣಲು ಹಂಸವಾಗಿ ಹೊರಟನು. ಸ್ತಂಭದ ಮೇಲ್ಭಾಗದ ಅಂತ್ಯವನ್ನು ಕಾಣದ ಬ್ರಹ್ಮ ಎಷ್ಟೋ ವರ್ಷಗಳಿಂದ ಆ ಸ್ತಂಭದ ಮೇಲ್ಭಾಗದಿಂದ ಬೀಳುತ್ತಿದ್ದ ಕೇದಿಗೆ ಹೂವನ್ನು ಸಾಕ್ಷಿ ಹೇಳುವಂತೆ ತನ್ನೊಂದಿಗೆ ಯುದ್ಧ ರಂಗಕ್ಕೆ ಕರೆತರುವನು. 'ಹಾಗಲಕಾಯಿಗೆ ಬೇವಿನ ಕಾಯಿ ಸಾಕ್ಷಿ' ಎಂಬಂತೆ ಕೇದಿಗೆ ಹೂವು ಸಾಕ್ಷಿಯನ್ನು ಹೇಳಲು ಒಪ್ಪಿಕೊಂಡಿತ್ತು. ವಿಷ್ಣುವಿನೊಂದಿಗೆ ಸುಳ್ಳನ್ನೇ ಸಾಧಿಸಲು ಹೊರಟಂತಹ ಬ್ರಹ್ಮನ ಮೇಲೆ ಕುಪಿತವಾದ ಶಿವ ಬ್ರಹ್ಮನ ಅಹಂಕಾರದ ಅಂತ್ಯಕ್ಕಾಗಿ, ಅವನ ಉಬ್ಬುಗಳ ನಡುವಿನಿಂದ ಭೈರವ ಜನಿಸಿದನು. ಶಿವನ ಆಜ್ಞೆಯಂತೆ ಭೈರವ ಸುಳ್ಳಾಡಿದ ಬ್ರಹ್ಮನ ತಲೆಯನ್ನು ಕತ್ತರಿಸಿದ.

ಬ್ರಹ್ಮನಿಗೆ ಆದಿಯಲ್ಲಿ ಐದು ತಲೆಗಳಿದ್ದು. ಸೃಷ್ಟಿಕರ್ತ ಎಂಬ ಅಮಲು ಹೆಚ್ಚಾದಂತೆ ಶಿವನಿಂದಲೇ ಐದನೆಯ ತಲೆಯ ನಾಶವಾಯಿತು ಎಂಬುದು ವ್ಯಕ್ತವಾಗುತ್ತದೆ. ಅಂದರೆ ಅಹಂಕಾರವೆಂಬ ಐದನೇ ತಲೆಯ ಮುಕ್ತಿಯೊಂದಿಗೆ ಬ್ರಹ್ಮ ಸುಜ್ಞಾನಿಯಾದನು. ಸುಳ್ಳಾಡಿದರೆ ಮನುಷ್ಯನೇನು, ದೇವನೇನು ಎಲ್ಲರೂ ಪಾಪ ಕೃತ್ಯಕ್ಕೆ ಶಿಕ್ಷೆ ಅನುಭವಿಸಲೇಬೇಕು ಎಂಬ ನೀತಿ ನಿರೂಪಿತವಾಗಿದೆ. ಬ್ರಹ್ಮನ ತಲೆ ಕತ್ತರಿಸಿದ ಕಾರಣ ಭೈರವಗೆ ಬ್ರಹ್ಮ ಹತ್ಯಾ ದೋಷ ಉಂಟಾಯಿತು. ಬ್ರಹ್ಮನ ತಲೆ ಕಪಾಲವಾಗಿ ಮಹಾಕಾಲ ಭೈರವನ ಕೈಯನ್ನು ಹಿಡಿಯಿತು. ಕಪಾಲದಿಂದ ಮೋಕ್ಷ ಪಡೆಯಲು ಕಾಲಭೈರವನು ಮೂರು ಲೋಕಗಳನ್ನು ಸುತ್ತಿದನು. ಕೊನೆಗೆ ವಿಷ್ಣುವಿನ ಸಲಹೆಯಂತೆ ಗಂಗಾತೀರದ ಪುಣ್ಯಕ್ಷೇತ್ರ ವಾರಣಾಸಿಗೆ ತಲುಪಿದನು. ಹೆಬ್ಬಾಗಿಲು ದಾಟಿದಂತೆ ಕಪಾಲ ನೆಲಕ್ಕೆ ಬಿತ್ತು. ಇದನ್ನೇ ಕಪಾಲಮೋಕ್ಷವೆಂದು ಹೇಳುತ್ತಾರೆ. ಶಿವನ ಆದೇಶದಂತೆ ಭೈರವ ವಾರಣಾಸಿಯಲ್ಲಿ ಕ್ಷೇತ್ರಪಾಲಕನಾಗಿ ನೆಲೆಸುವನು. ಪಾಪದ ಪ್ರಾಯಶ್ಚಿತವಾಗುವರೆಗೂ ವಿಧಿ ಯಾರನ್ನೂ ಬಿಡುವುದಿಲ್ಲ ಎಂಬುದು ವ್ಯಕ್ತವಾಗಿದೆ. ಭೈರವನ ಮೋಕ್ಷಕ್ಕೆ ಭೂಲೋಕದ ಮಹಿಮೆ ಕಾರಣವಾಯಿತು ಎಂಬುದು ವಿಶೇಷವಾಗಿದೆ.

**ಶಂಕರ ಸಂಹಿತೆ**

ಶಂಕರ ಸಂಹಿತೆಯ ಪ್ರಕಾರ “ಪರಶಿವನೆ ಪಾರ್ವತಿಗೆ ಶಿವನ ಒಂದು ರೂಪ ಭೈರವೇಶ್ವರ” ಎಂದು ಹೇಳಿರುವುದರಿಂದ ಶಿವನ ಮತ್ತೊಂದು ಅವತಾರ ಭೈರವ ಎಂಬುದು ಖಚಿತವಾಗುವಂತೆ ಮಾಡಿದೆ. ಬಹಳ ಹಿಂದೆ ದೇವತೆಗಳು ಋಷಿಮುನಿಗಳಿಗೆ ಜಗತ್ತಿನಲ್ಲಿ “ಪರಬ್ರಹ್ಮ ಸ್ವರೂಪಿ ಯಾರು”? ಎಂಬ ಪ್ರಶ್ನೆ ಉದಯಿಸಿತು. ಸಂಶಯವನ್ನು ಪರಿಹರಿಸಿಕೊಳ್ಳಲೆಂದು ದೇವತೆಗಳು ಮುನಿಗಳು ಹೊರಟರು. ಮೇರು ಪರ್ವತದಲ್ಲಿ ವಿಹರಿಸುತ್ತಿರುವ ಬ್ರಹ್ಮ ಮತ್ತು ವಿಷ್ಣು ಇಬ್ಬರನ್ನು ಕಂಡು ತಮ್ಮ ಆಲೋಚನ ಲಹರಿಯನ್ನು ಅವರ ಮುಂದೆ ಹೇಳಿಕೊಂಡರು. ಕೂಡಲೇ ಬ್ರಹ್ಮ “ನಾನು ಈ ಜಗತ್ತಿನ ಮಹಾಕರ್ತ” ಎಂದು ಸಾರಿದನು ಅದನ್ನು ಕೇಳಿದ ವಿಷ್ಣು “ಜಗತ್ತಿನ ಮಹಾಕರ್ತನು ನಾನೇ” ಎಂದು ಹೇಳಿಕೊಂಡನು. ಇಬ್ಬರ ನಡುವೆ ವಾಗ್ವಾದಗಳು ಪ್ರಾರಂಭವಾದವು. ಅಜ್ಞಾನದಿಂದ ವಾಗ್ವಾದದಲ್ಲಿ ನಿರತರಾದ ಬ್ರಹ್ಮ ಮತ್ತು ವಿಷ್ಣು ತಮ್ಮ ಸ್ಥಾನವನ್ನು ಮರೆತರು.ಇವರ ವಾಗ್ವಾದದಿಂದ ತತ್ತರಿಸಿದ ದೇವತೆಗಳು, ಋಷಿ ಮುನಿಗಳು ಸ್ಥಳದಿಂದ 'ಅಲ್ಪರ ಸಂಘ ಅಭಿಮಾನ ಭಂಗ' ಎಂಬುದು ಅವರ ಪಲಾಯನದ ಧ್ವನಿತ್ವವಾಗಿದೆ. ವಿಷಯ ತಿಳಿದ ಪರಶಿವನು “ಜಗತ್ತಿನ ಕರ್ತೃ ನಾನಿರುವಾಗ ವ್ಯರ್ಥವೇಕೆ ಜಗಳವಾಡುವಿರಿ” ಎಂದು ಹೇಳಿದನು. ಇದನ್ನು ಲೆಕ್ಕಿಸದ ಇಬ್ಬರು ಮತ್ತೆ ವಾದಕ್ಕೆ ಇಳಿದರು. ಇಬ್ಬರ ಅಜ್ಞಾನದ ವರ್ತನೆಯನ್ನು ಮುರಿಯಲೇಬೇಕೆಂದು ಭಾವಿಸಿದ ಶಿವ ತೇಜಮಯವಾದ ರೂಪ ತಾಳಿದನು. ವಿಷ್ಣು ಭಕ್ತಿಯಿಂದ ಮಣಿದು ವೈಕುಂಠಕ್ಕೆ ತೆರಳಿದನು. ಬ್ರಹ್ಮ ಮಾತ್ರ ದುರ್ನಡತೆಯಿಂದ ಮತಿಹೀನನಾಗಿ ಶಿವನನ್ನು ನಿಂದಿಸಲು

ಆರಂಭಿಸಿದನು.ಶಿವನು ಕೆರಳಿ ಭೈರವನನ್ನು ಮನದಲ್ಲೇ ನೆನೆದನು. ಭಸ್ಮದಿಂದ ಧಾರಣೆಯಾದ ಭೈರವ ಪ್ರಕಟನಾದನು. ಭೈರವ ಪಾದಕಟಕಗಳನ್ನು ಧರಿಸಿ, ಕಪಾಲಮಾಲಾ ಭೂಷಿತನಾಗಿ, ಪರಶು, ಶೂಲ,ಪಾಶ, ಡಮರುಗಳನ್ನು ಕೈಯಲ್ಲಿ ಹಿಡಿದು ಹೊಳೆಯುವ ಕಣ್ಣುಗಳಿಂದ, ಕೆದರಿದ ಜಡೆಯಿಂದ ಭಯಂಕರವಾಗಿ, ಮಂದಸ್ಮಿತವಾದ ಮನೋಹರನಾಗಿ ಬ್ರಹ್ಮಾಂಡವೇ ಆವಿರ್ಭವಿಸಿದ ರೀತಿಯಲ್ಲಿ ಭೈರವ ಕಾಣಿಸಿಕೊಂಡನು. ಇಲ್ಲಿ ಸ್ಮಶಾನ ರುದ್ರನಾದ ಭೈರವನು ಭಸ್ಮ ಧಾರಣೆಯ ಪ್ರತೀಕವಾಗಿ ನಾಥಪಂಥದವರು ಭಸ್ಮ ಧಾರಣೆ ಮಾಡಿಕೊಳ್ಳುವ ಪ್ರತೀತಿ ಇದೆ. ಭಸ್ಮ ಧಾರಣೆಯುಆಧ್ಯಾತ್ಮಿಕ ಜೀವನದ ಔನತ್ಯವನ್ನು ಪ್ರತಿಬಿಂಬಿಸುತ್ತದೆ.

ಭೈರವನ ಭಯಾನಕ ರೂಪವೂ ದುಷ್ಟರ ನಿಗ್ರಹದ ಪ್ರತಿಬಿಂಬವಾಗಿದೆ. ಇದಕ್ಕೆ ಸಾಕ್ಷಿಯಾಗಿ ಕೊರಳಿನಲ್ಲಿರುವ ಕಪಾಲಮಾಲೆಯಾಗಿದೆ. ದುಷ್ಟರ ಸಂಹಾರದ ದ್ಯೋತಕವಾಗಿ ಕೈಯಲ್ಲಿರುವ ಪರಶು, ಶೂಲ, ಪಾಶ, ಡಮರುಗಗಳು ಸಾಕ್ಷಿಯಾಗಿ ನಿಲ್ಲುತ್ತವೆ. ಡಮರುಗದ ಶಬ್ದವು ಎಚ್ಚರಿಕೆಯನ್ನು ಸಂಕೇತಿಸುತ್ತದೆ. ಈ ಎಚ್ಚರಿಕೆಯ ಶಬ್ದವನ್ನು ಅಲಕ್ಷದಿಂದ ಕಂಡಾಗ ಪರಶು, ಶೂಲ, ಪಾಶಗಳ ಪ್ರಯೋಗ ಖಚಿತ. ಇಲ್ಲಿ ಭೈರವನ ಸ್ವರೂಪವನ್ನು ಉಗ್ರ ರೂಪದಲ್ಲಿ ಚಿತ್ರಿಸಿದರು, ಅವನ ಮುಖದಲ್ಲಿ ಮಾತ್ರ ಕಿರುನಗೆಯು ಮೂಡಿದೆ. ಇದು ದುಷ್ಟರ ಸಂಹಾರದ ನಂತರ ಮನೋಹರವಾದ ಮಂದಸ್ಮಿತ ಮುಖ ಶಿಷ್ಟ ಜನರ ರಕ್ಷಕರಾಗಿ ಭರವಸೆಯ ಬೆಳಕಿನಂತೆ ಕಂಡು ಬರುತ್ತದೆ.

ಶಿವನನ್ನು ನಮಸ್ಕರಿಸಿ ನನ್ನಿಂದ ಆಗಬೇಕಾದ ಕೆಲಸವನ್ನು ಬೆಸೆಸುವಂತೆ ಭೈರವ ಪ್ರಾರ್ಥಿಸುತ್ತಾನೆ ಶಿವ ತನ್ನನ್ನು ನಿಂದಿಸಿದ ಈ ಬ್ರಹ್ಮನ ತಲೆಯನ್ನು ಕತ್ತರಿಸಿ, ದೇವತೆ ಮತ್ತು ಋಷಿಗಳ ನಡುವಿನ ವ್ಯಾಜ್ಯಗಳನ್ನು ಪರಿಹರಿಸಿ, ಶರಣಾದವರಿಗೆ ಪ್ರಾಣದಾನ ಮಾಡಿ, ದೇವತೆಗಳಿಗೆ, ಋಷಿಗಳಿಗೆ ರಕ್ಷಕನಾಗಿ ಭೂಮಿಯಲ್ಲಿ ಪೂಜ್ಯನಾಗು ಎಂದು ಹರಸಿ ಮಾಯಾವದನು. ಕೋಪಗೊಂಡ ಭೈರವ ಬ್ರಹ್ಮನ ಐದನೇ ಶಿರವನ್ನು ಕತ್ತರಿಸಿದನು. ಶಿರದಿಂದ ಪ್ರವಹಿಸಿದ ರಕ್ತದ ನದಿಯನ್ನು ಕಂಡ ಬ್ರಹ್ಮ ಮೂರ್ಚಿತನಾದ, ಕೋಪದಿಂದ ಸಮಾಧಾನಗೊಂಡ ಭೈರವ ರಕ್ತವನ್ನು ಪೋಷಿಸಿ ಬ್ರಹ್ಮನಿಗೆ ಪ್ರಾಣದಾನ ಮಾಡಿದನು. ಇಲ್ಲಿ ಶರಣಾದವರನ್ನು ಎಂದು ಭೈರವ ಶಿಕ್ಷಿಸುವುದಿಲ್ಲವೆಂದು ನಿವೇದನೆಗೊಂಡಿದೆ. ಬ್ರಹ್ಮ ವಿನಯದಿಂದ ತನ್ನ ರುಂಡವನ್ನು ಭೈರವನು ಸದಾಕಾಲ ಕೊರಳಿನಲ್ಲಿಯೇ ಧರಿಸಬೇಕೆಂದು. ಕಪಾಲದಲ್ಲಿಯೇ ಭಿಕ್ಷೆ ಸ್ವೀಕರಿಸಬೇಕೆಂದು ಬೇಡಿಕೊಂಡನು. ಪ್ರಸನ್ನನಾದ ಶಿವ ಅದಕ್ಕೆ ಒಪ್ಪಿದನು. ಬ್ರಹ್ಮನ ರುಂಡ ದುಷ್ಟರಿಗೆ ಮುನ್ನೆಚ್ಚರಿಕೆಯ ಸೂಚನೆಯಾಗಿದೆ. ಕಪಾಲದಿಂದ ಭಿಕ್ಷೆ ಬೇಡಿ ತಿನ್ನುವುದು ಆರಾಧನೆಗೆ ಅನುಗ್ರಹನೀಡಿದ ರೂಪವಾಗಿದೆ.

ಬ್ರಹ್ಮನ ಅಭಿಲಾಷೆಯಂತೆ ಕಪಾಲ ಹಿಡಿದು ಭೈರವ ನಡೆದನು. ಪರಶಿವನ ಆಜ್ಞೆಯಂತೆ ಭೂಲೋಕದಲ್ಲಿ ಸಂಚರಿಸಿ ದುಷ್ಟರ ರಕ್ತವನ್ನು ಶಿಕ್ಷಿಸಿ ಭಿಕ್ಷೆಯಾಗಿ ಪಡೆದು, ಗರ್ವಿತರಿಗೆ ಮೃತ್ಯು ಪ್ರಾಪ್ತಿಯಾಗುತ್ತಾ, ಮತ್ತೆ ಕರುನಾಳುವಾಗಿ ಜೀವದಾನ ಮಾಡುತ್ತ ಸಾಗಿದನು. ಭೈರವನ ಸೃಷ್ಟಿಯ ಮೂಲ ಧ್ಯೇಯವನ್ನು ಇಲ್ಲಿ ತಿಳಿಸಲಾಗಿದೆ. ಲೋಕವನ್ನು ಸಂಚರಿಸುವ ಭೈರವ ಒಮ್ಮೆ ವೈಕುಂಠಕ್ಕೆ ನಡೆದ ಶ್ರೀವಿಷ್ಣುಯಲ್ಲಿ ರಕ್ತ ಬೇಡಲು ಹೊರಟನು. ಆದರೆ ಕಾವಲಿನಲ್ಲಿದ್ದ ವಿಷ್ವಕೇಶನು ಭೈರವನನ್ನು ತಡೆದನು. ಕುಪಿತನಾದ ಭೈರವ ಶೂಲ ಮತ್ತು ಕಪಾಲಗಳನ್ನು ಬಳಸಿ ಅವನ ಅಂತ್ಯಗೊಳಿಸಿದನು. ವಿಷ್ಣುಯನ್ನು ಸಂಧಿಸಿ ರಕ್ತ ಬಿಕ್ಷೆ ಕೇಳುವನು. ಇದಕ್ಕೆ ಒಪ್ಪಿದ ವಿಷ್ಣು ತನ್ನ ಹಣೆಯನ್ನು ಸೀಳಿ ರಕ್ತಧಾರೆ ಹರಿಸಿದನು. ಕ್ಷಣಾರ್ಧದಲ್ಲಿಯೇ ರಕ್ತವನ್ನು ಕಂಡ ವಿಷ್ಣು ಮೂರ್ಛೆ ಹೊಂದಿದನು.

ಭಯಭೀತಿಯಿಂದ ಶ್ರೀದೇವಿ ಹಾಗೂ ಭೂದೇವಿಯು ಭೈರವನನ್ನು ಭಕ್ತಿಯ ಮಾತುಗಳಿಂದ ತಡೆದು ಸುಮಂಗಲಿ ಆಗಿರುವಂತೆ ಕರುಣಿಸು ಎಂದು ಕೇಳಿದರು. ಆಗ ಭೈರವ ಶಾಂತ ಚಿತ್ತನಾಗಿ ಭಕ್ತಿಗೆ ಮೆಚ್ಚಿ ಶ್ರೀಹರಿಯನ್ನು ಬದುಕಿಸಿದನು. ಆದರೆ ಬ್ರಹ್ಮ ಕಪಾಲ ಶ್ರೀಹರಿಯ ರಕ್ತದಿಂದ ಅರ್ಧ ಮಾತ್ರ ತುಂಬಿತ್ತು. ಎಚ್ಚರಗೊಂಡ ಶ್ರೀಹರಿಯು ಭೈರವನನ್ನು ಸ್ತುತಿಸಿ ಪ್ರಸನ್ನಗೊಳಿಸಿದನು. ಮುಂದೆ ಭೈರವನು ಮದವೇರಿದ ಮದಗಜಗಳಂತೆ ವರ್ತಿಸುವ ಅಹಂಕಾರಿಗಳನ್ನು ತನ್ನ ಮೂರನೇ ಕಣ್ಣಿನಿಂದ ಭಸ್ಮ ಮಾಡಿ ಆ ಭಸ್ಮವನ್ನು ತನ್ನ ಮೈಗೆ ಲೇಪಿಸಿಕೊಳ್ಳುತ್ತ ಶಿರೋಮಾಲೆಯನ್ನು ಧರಿಸಿ ಸಮಸ್ತ ದೇವತೆಗಳನ್ನು ಶ್ವಾನಗಳನ್ನಾಗಿ ಮಾಡಿಕೊಂಡು ಅವುಗಳ ಜೊತೆಯಲ್ಲಿ ಮಹಾ ಸ್ಮಶಾನದಲ್ಲಿ ಕುಳಿತನು. ಭೈರವನ ಭಯಾನಕ ರೂಪದ ಜನನದ ಉದ್ದೇಶವೂ ಸ್ಪಷ್ಟವಾಗಿದೆ. ಸ್ಮಶಾನ ವಾಸಿಯಾಗಿ ಬದುಕಿನ ಸಮತೋಲನ ಬಿಂಬಿಸುತ್ತದೆ. ಗರ್ಭವನ್ನು ಅಡಗಿಸಲು ನಾಯಿಗಳಾಗಿ ಮಾಡಿಕೊಂಡು ತಿರುಗುವ ಯೋಗಿಯ ರೀತಿಯಲ್ಲಿ ಕಾಣಿಸಿಕೊಂಡಿದ್ದಾನೆ ಭೈರವ.

**ಶಿವ ರಹಸ್ಯ ಮತ್ತು ಸ್ಕಂದಪುರಾಣ, ಕಾಶಿ ಖಂಡ ಮಹಾತ್ಮೆ**

ಶಿವ ರಹಸ್ಯದಲ್ಲಿ ವ್ಯಕ್ತವಾಗಿರುವ ಭೈರವೇಶ್ವರ ಅವತಾರದ ನಿರೂಪಣೆಯು ಭಿನ್ನವಾಗಿದೆ. ಹಿಂದೆ ವಸಿಷ್ಠರು ಹಾಗೂ ಮುನಿ ಸಮೂಹದವರು ಕಾಶಿಯಲ್ಲಿ ವಿಶ್ವೇಶ್ವರನನ್ನು ಪೂಜಿಸಿ ಮಧ್ಯಾಹ್ನದ ಸಂದರ್ಭಕ್ಕೆ ಕೃತ್ತಿವಾಸವೇಶ್ವರ ಉಪಾಸನದಲ್ಲಿ ತೊಡಗಿದರು. ಈ ಸಂದರ್ಭದಲ್ಲಿ ಬ್ರಹ್ಮನು ಅಲ್ಲಿಗೆ ಆಗಮಿಸಿದನು ಶಿವನ ಪೂಜೆಗೆ ಬಂದ ಅವನು ಬಿಲ್ವಪತ್ರೆಯಾಗಲಿ, ಶಿವ ಪೂಜಾ ಸಾಮಗ್ರಿಯಾಗಲಿ ತಂದಿರಲಿಲ್ಲ. ಅದು ಅಲ್ಲದೆ ಶಿವನ ನಾಮವನ್ನು ಕೂಡ ಜಪಿಸುವುದಿಲ್ಲ. ಇದನ್ನು ಕಂಡ ವಸಿಷ್ಠರು ಬ್ರಹ್ಮನನು ಪ್ರಶ್ನಿಸಿದರು" ಪೂಜೆಗೆ ಬಂದಿರುವ ನೀನು ಯಾವ ವಸ್ತು ಮಹೇಶ್ವರಿನಿಗೆ ಪ್ರಿಯವೋ ಅಂತಹ ಬಿಲ್ವಪತ್ರೆಯನ್ನು ಕೂಡ ನೀನು ತಂದಿಲ್ಲವಲ್ಲ, ಶಿವನ ಪೂಜೆಗೆ ಬರಿಗೈಲಿ ಬಂದರೆ ನರಕಕ್ಕೆ ಹೋಗುತ್ತಾರೆ ಎಂಬುದು ನಿನಗೆ ತಿಳಿಯದೆ" ಎಂದರು. ಶಿವ ಪೂಜೆಯನ್ನು ನಿರಾಕರಿಸಿ ಬ್ರಹ್ಮ ಗರ್ವದ ನುಡಿಗಳನ್ನು ಆಡಲು ಆರಂಭಿಸಿದನು. "ನಾಲ್ಕು ವೇದಗಳು, 14 ಲೋಕಗಳನ್ನು, ಸಕಲ ಜೀವರಾಶಿಗಳನ್ನು ಸೃಷ್ಟಿಸಿ ಅವುಗಳ ರಕ್ಷಣೆಯನ್ನು ವಹಿಸಿಕೊಂಡಿರುವ ನನಗಿಂತ ಶಿವ ಪೂಜ್ಯನೇ"? ಎಂದು ಪ್ರಶ್ನಿಸಿ ಉದ್ಧಟನತನದಿಂದ ವರ್ತಿಸಿ ಶಿವನನ್ನು ಪೂಜಿಸುವವರು ಅಜ್ಞಾನಿಗಳು ಎಂದು ಮೂದಲಿಸಿದೆ.

ಆಗ ಶ್ರೀವಿಷ್ಣು ಪೂಜಾ ಸ್ಥಳಕ್ಕೆ ಆಗಮಿಸಿ ಶಿವಪೂಜೆ ಕೈಗೊಳ್ಳಲು ಬೇಕಾದ ಸಕಲ ಸಾಮಾಗ್ರಿಗಳನ್ನು ತಂದು ಶಿವನ ನಾಮ ಸ್ಮರಣೆ ಮಾಡಿದನು. ಕೋಪಗೊಂಡ ಬ್ರಹ್ಮ "ಸೃಷ್ಟಿಕರ್ತನಾದ ನಿನ್ನ ತಂದೆ ನಾನಿರುವಾಗ ಶಿವನಿಗೆ ಪೂಜೆ ಸಲ್ಲಿಸುತ್ತಿರುವೆ ಎಲ್ಲಾ ನಿನಗೆ ಇದು ಸರಿಯೇ" ಎಂದಾಗ, ವಿಷ್ಣು "ಶಿವ ಪೂಜೆಯನ್ನು ಮಾಡದವನು ಮರುಳನು" ಎಂದನು. ಬ್ರಹ್ಮನ ಅಜ್ಞಾನದಿಂದ ಜಗತ್ತಿಗೆ ಸರ್ವಶ್ರೇಷ್ಠನಾದ ನನ್ನನ್ನು ಪೂಜಿಸಬೇಕು ಎಂದು ಹೇಳಿ ಶಿವ ನಿಂದನೆಯ ನುಡಿಗಳನ್ನು ಪ್ರಾರಂಭಿಸಿದನು. ವಿಷ್ಣು ಶಿವನನ್ನು ಧ್ಯಾನಿಸಿ ಧರ್ಮರಕ್ಷಕ 'ಅಧರ್ಮನುಡಿಯುವ ಬ್ರಹ್ಮನನ್ನು ಶಿಕ್ಷಿಸು' ಎಂದು ಬೇಡಿದನು. ಅವರೆಲ್ಲ ಧ್ಯಾನಿಸಿದಂತೆ ಶಿವನ ಶರೀರದಿಂದ ಉಗ್ರರೂಪದ ಕಾಲಭೈರವ ಆವಿರ್ಭವಿಸಿದ. ಅವರೆಲ್ಲರಿಗೂ ಭಯ ಆಶ್ಚರ್ಯ ಒಮ್ಮೆಲೆ ಮೂಡುವಂತೆ ಭೈರವ ಉದ್ಭವಿಸಿದನು. ಭೈರವನು ಆದಿ ದೈವವಾದ ಪರಶಿವನಿಗೆ ನಮಸ್ಕರಿಸಿ ತನ್ನ ಕೆಲಸ ಏನೆಂದು ಹೇಳಿದನು.

ಹಾಗೆ ತನ್ನ ಶಕ್ತಿಯ ಪರಿಚಯಾತ್ಮಕವಾಗಿ ಹೇಳಲು ಸಮುದ್ರವನ್ನು ಒಣಗಿಸಲೆ?, ಪರ್ವತವನ್ನು ಪುಡಿ ಮಾಡಲೆ? ಎಲ್ಲಾ ದೇವತೆಗಳನ್ನು ದಹಿಸಲೇ? ಇವು ಭೈರವನ ಊಹಾತಿತವಾದ ಶಕ್ತಿಗೆ ನಿಲುಕದ ಅಘಾದ ಶಕ್ತಿ ಸ್ಪೋಟವೆಂದು ವ್ಯಕ್ತವಾಗಿದೆ. ಇಲ್ಲಿ ಭೈರವನು ಬ್ರಹ್ಮನ ತಲೆಯನ್ನು ಆಯುಧಗಳಿಂದ ಕತ್ತರಿಸುವ ಬದಲು ತನ್ನ ಉಗಿರಿನಿಂದಲೇ ಛೇದಿಸುವುದು ಭೈರವನ ಅಸಾಧಾರಣ ಸಾಮರ್ಥ್ಯದ ಪರಿಚಯವಾಗಿದೆ. ಮುಂದುವರೆದು ಬ್ರಹ್ಮನ ದೇಹ ಭೂಮಿಗೆ, ರುಂಡ ಪಾತಾಳದ ಆದಿಶೇಷನ ಹತ್ತಿರ ಹೋಗಿ ಬೀಳುತ್ತದೆ. ಆದಿಶೇಷನು ಶಿವನ ಕೋಪದಿಂದ ಬ್ರಹ್ಮನಿಗೆ ಈ ಗತಿ ಒದಗಿದೆ ಎಂದೆಣಿಸಿ ವಿಷಯವನ್ನು ತಿಳಿಯಲು ಬಂದನು.

ಶಿವನನ್ನು ಪೂಜಿಸಿ ಕೃತ್ತಿವಾಸೇಶ್ವರನ ದರ್ಶನಕ್ಕೆ ಬಂದಾಗ ಭೈರವನನ್ನು ಕಂಡ ಆದಿಶೇಷ ಭಯಗೊಂಡು ಮೂರ್ಚಿತನಾದನು. ಆದಿಶೇಷನು ಭೈರವನ ಕೃಪೆಯಿಂದ ಎಚ್ಚರಗೊಂಡು, ಉಗ್ರರೂಪದಿಂದ ಸಹಜ ರೂಪಕ್ಕೆ ಬರುವಂತೆ ಸಕಲರು ಬೇಡಿದಾಗ ಕೃಪೆಯಿಂದ ಭೈರವ ಸಹಜ ರೂಪಕ್ಕೆ ಬಂದನು. ಬ್ರಹ್ಮನನ್ನು ಬದುಕಿಸಲು ಬೇಡಿದಾಗ ಬ್ರಹ್ಮನಿಗೆ ಪ್ರಾಣದಾನ ಮಾಡಿದನು. ಅಂದಿನಿಂದ ದುಷ್ಟ ಶಕ್ತಿಗಳ ನಿಗ್ರಹಕ್ಕಾಗಿ ಕಾಶಿಯಲ್ಲಿ ಹಾಗೆಯೇ ಸರ್ವ ಸ್ಥಳದಲ್ಲಿಯೂ ಭೈರವನು ನೆಲೆಸಿದ ಎಂಬುದು ಈ ಕಥೆಯಲ್ಲಿ ವ್ಯಕ್ತವಾಗಿದೆ. ಈ ಕಥೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ.ಈ ಕಥಾಪ್ರಸಂಗವು ನಡೆಯುವುದು ಭೂಲೋಕದಲ್ಲಿ ಅದರಲ್ಲೂ ಪವಿತ್ರ ಸ್ಥಳ ಕಾಶಿಯಲ್ಲಿ ನಡೆದಿದೆ. ಶಿವನನ್ನು ಆರಾಧಿಸಲು ವಸಿಷ್ಟರಾಧಿಯಾಗಿ ಭೂಲೋಕ ಮುನಿ ಸಮೂಹವು ನೆರೆದಿರುವುದು ಅಲ್ಲಿಗೆ ಬ್ರಹ್ಮ ಬರುವನು. ಹಾಗೆ ವಿಷ್ಣು ಶಿವನನ್ನು ಆರಾಧಿಸಲು ಆಗಮಿಸುವವನು. ಹಾಗೆಯೇ ಪಾತಾಳದ ಅಧಿಪತಿಯಾದ ಆದಿಶೇಷನ ಆಗಮನವು ವಿಶೇಷವಾಗಿದೆ. ಇಲ್ಲಿ ವಿಷ್ಣು ಶಿವನು ಪೂಜ್ಯನು ಒಪ್ಪಿಕೊಂಡಿದ್ದಾನೆ. ಇದರ ಅರ್ಥ ವೈದಿಕ ಧರ್ಮದವರು ಅವೈದಿಕ ಪಂಥವಾದಂತಹ ನಾಥಪಂಥವನ್ನು ಒಪ್ಪಿಕೊಂಡಿರಬೇಕೆಂಬ ಸೂಚಕವಿದೆ. ಸಂಘರ್ಷದ ಒಡಲಿನಲ್ಲಿ ಸಂಧಾನದ ಛಾಯೆ ಮೂಡಿದೆ.

## ಶಿವ ಪುರಾಣದ ಶತರುದ್ರ ಸಂಹಿತೆ

ಶಿವಪುರಾಣದ ಶತರುದ್ರ ಸಂಹಿತೆಯಲ್ಲಿ ಭೈರವನ ಉತ್ಪತಿಯ ಬಗ್ಗೆ ಮುಂದಿನ ಕಥೆಯನ್ನು ಹೆಣೆಯಲಾಗಿದೆ. ಶಿವನ ವಾಹನನಾದ ನಂದಿಕೇಶ್ವರನು ಸನತ್ಕುಮಾರ ಋಷಿಗೆ "ಶಿವನ ಪೂರ್ಣಾವತಾರವೇ ಭೈರವ" ಎಂದು ತಿಳಿಸುತ್ತಾನೆ. ಭೈರವೇಶ್ವರನು ಪರಮೇಶ್ವರನ ಪೂರ್ಣ ರೂಪ, ಆದರೆ ಬುದ್ಧಿ ಹೀನರು ಇದನ್ನು ನಂಬುವುದಿಲ್ಲ ಎಂದು ಹೇಳಿ ಆಪ್ತ ವರ್ತಿಗಳಿಂದ ತಿಳಿಯಲ್ಪಡುವ ವಿಷಯ ಸತ್ಯಕ್ಕೆ ಹತ್ತಿರವಾಗಿರುತ್ತದೆ ಎಂಬ ಜಾಡನ್ನು ಹಿಡಿದು ಕಥೆ ನಿರೂಪಿತವಾಗಿದೆ. ಇಲ್ಲಿಯೂ ಬ್ರಹ್ಮನ ನಿಗ್ರಹಕ್ಕಾಗಿಯೇ ಭೈರವನ ಜನನವೆಂದು ತಿಳಿಸಲಾಗಿದೆ 'ಶಿವನೇ ಭೈರವ ಭೈರವನೇ ಶಿವ' ಎಂಬ ಅಭೇದ್ಯ ಕಲ್ಪನೆಯನ್ನು ಮೂಡಿಸುವ ಪರಿಕಲ್ಪನೆಯು ವ್ಯಕ್ತವಾಗಿದೆ .

## ಕಾಳಿಕಾ ಪುರಾಣ 26ನೇ ಅಧ್ಯಾಯ

ಮುಂದೆ ಸಾಗಿ ಕಾಳಿಕಾ ಪುರಾಣದ 26ನೇ ಅಧ್ಯಾಯದಲ್ಲಿ ಮಾರ್ಕಂಡೇಯ ಋಷಿಗಳ ಬಳಿ ಶರಭಾವತಾರವಾದ ನಂತರ ಶಿವನ ಮುಂದಿನ ಅವತಾರ ಯಾವುದು ಎಂದು ಕೇಳುವಾಗ, ಶರಭ ಮೂರ್ತಿಯ ಒಂದೊಂದು ಅಂಗದಿಂದ ಒಂದೊಂದು ಅವತಾರವುಗಳಾದವು. ಹಾಗೆ ಅವತರಿಸಿದ ಶಂಕರನ ಮಧ್ಯದಿಂದ ಜನಿಸಿದವನೇ ಭೈರವ. ಇಲ್ಲಿಯೂ ದುಷ್ಟ ನಿಗ್ರಹವೇ ಉತ್ಪತ್ತಿಗೆ ಮೂಲ ಕಾರಣ ಜೊತೆಗೆ ಲೋಕಕಲ್ಯಾಣವಾಯಿತೆಂಬ ನಿರೂಪಣೆ ಇದೆ. ಶಿವನ ಅವತಾರದ ಮತ್ತೊಂದು ರೂಪ ಭೈರವ ಎಂಬುದು ಇಲ್ಲಿಯೂ ಸ್ಪಷ್ಟವಾಗಿ ತಿಳಿಸಲಾಗಿದೆ.

## ಭವಿಷ್ಯ ಮಹಾಪುರಾಣ

ಭವಿಷ್ಯ ಮಹಾಪುರಾಣದಲ್ಲಿನ ಪ್ರತಿಸರ್ಗ ಪರ್ವದಲ್ಲಿ 13ನೇ ಅಧ್ಯಾಯದಲ್ಲಿ ಭೈರವನ ಅವತಾರದ ಬಗ್ಗೆ ನಿರೂಪಣೆ ಇದೆ. ಕಥೆಯ ಬ್ರಹ್ಮನ ಶಿರ ಛೇದನದ ಕಾರಣ ವ್ಯತ್ಯಾಸವನ್ನು ಕಂಡಿದೆ. ಹಾಗೆಯೇ ನಿರೂಪಣೆಯಲ್ಲಿಯೇ ವ್ಯತ್ಯಾಸ ಮೂಡಿ ಬಂದಿದೆ. ಬ್ರಹ್ಮ ಸೃಷ್ಟಿಕರ್ತ. ಸೃಷ್ಟಿ ಕಾರ್ಯದಲ್ಲಿ ತೊಡಗಿದಾಗ ಬ್ರಹ್ಮನ ಮುಖದಿಂದ ಜನಿಸಿದವಳು ಶಾರದೆ. ಶಾರದೆಯ ರೂಪಕ್ಕೆ ಬ್ರಹ್ಮ ಅವಳನ್ನ ಮೋಹಿಸಿದನು. ಕೋಪಗೊಂಡ ಶಾರದೆ ನಿನಗೆ ಐದು ಮುಖಗಳಿರುವುದು ಇರುವುದು ಸರಿಯಲ್ಲ, ವೇದಾಗಮವಾದ ನಾಲ್ಕು ಮುಖಗಳಿರುವುದೇ ಸರಿ ಎಂದು ಶಪಿಸಿ ಮಾಯವಾದಳು. ಬ್ರಹ್ಮ ಶಾರದೆಯ ಬೆನ್ನತ್ತಿದನು ಬ್ರಹ್ಮನ ನಿಗ್ರಹಕ್ಕೆ ರುದ್ರರೂಪಿಯಾದ ಭೈರವ ಉದಯಿಸಿದನು. ತನ್ನ ಉಗುರಿನಿಂದ ಬ್ರಹ್ಮನ ಐದನೇ ತಲೆಯನ್ನು ತುಂಡರಿಸಿದನು. ಹೆದರಿದ ಬ್ರಹ್ಮ ಭೈರವನಿಗೆ ಶರಣಾಗಿ ಧ್ಯಾನಿಸಿ ಸುತ್ತಿಸಿದನು. "ದೇವ ನನ್ನನ್ನು ಸತ್ಕಾರ್ಯದಲ್ಲಿ ನಡೆಸು" ಎಂದು ಬೇಡಿದನು ಬ್ರಹ್ಮನ ಅಹಂಕಾರ ಅಡಗಿ ನಂತರ ಅವನನ್ನು ಭೈರವ ಅನುಗ್ರಹಿಸಿದನು. ಇಲ್ಲಿ ಶಾರದೆಯನ್ನು ಮೋಹಿಸಿದ ಬ್ರಹ್ಮ ಶಿವನಿಂದ ಶಿಕ್ಷಿತನಾಗಿ ಪಂಚತಲೆಯಲ್ಲಿ ಒಂದನ್ನು ಕತ್ತರಿಸಿ ಅಜ್ಞಾನದ ಪೊರೆ ಕಳಚುವಂತೆ ಮಾಡಿದನು ಎಂಬುದು ವ್ಯಕ್ತವಾಗಿದೆ. ಮೊದಲ ಕಥನಗಳಲ್ಲಿ ಬ್ರಹ್ಮನು ಶ್ರೇಷ್ಠತೆಯೊಂದಿಗೆ ಕಥನವೂ ಪ್ರಾರಂಭವಾದರೆ ಇಲ್ಲಿ ಭಿನ್ನಗೊಂಡು ಸ್ತ್ರೀಯರ ರಕ್ಷಣೆಗಾಗಿ ಭೈರವ ನಿಲ್ಲುತ್ತಾನೆ. ಈ ಬದಲಾವಣೆಯು ನಾಥಪಂಥದಲ್ಲಿ ಸ್ತ್ರೀಯೋಗಿನಿಯರಿಗೆ ಅವಕಾಶ ಲಭಿಸಿರಬಹುದು. ಉಗುರಿನಿಂದ ತಲೆಯನ್ನು ಕತ್ತರಿಸುವ ಭೈರವನ ಉಗ್ರತೆ ಮತ್ತು ಶ್ರೇಷ್ಠತೆಯು ಸಾರುವಂತಿದೆ.

## ವಾಮನ ಪುರಾಣ

ವಾಮನ ಪುರಾಣದ 70ನೇ ಅಧ್ಯಾಯದಲ್ಲಿ ಭೈರವನು ಹೇಗೆ ಅವತಾರಗೊಂಡನು ಎಂಬುದಕ್ಕೆ ಒಂದು ಪ್ರಸಂಗವಿದೆ. ಶಿವ ಉಗ್ರ ರೂಪಿಯಾಗಿ ಅಂದಕಾಸುರನೊಡನೆ ಹೋರಾಡುವಾಗ, ಅಂಧಕಾಸುರ ತನ್ನ ಗದೆಯಿಂದ ಶಿವನ ತಲೆಯನ್ನು ಹೊಡೆದನು. ಆಗ ಹರಿದ ರಕ್ತದ ಮೊದಲ ಹನಿಯಿಂದ ಆದಿಭೈರವನು, ಉಳಿದ ಏಳು ಹನಿಯಿಂದ ಇನ್ನುಳಿದ ಏಳು ಜನ ಭೈರವರು ಜನಿಸಿದರು. ಈ ಅಷ್ಟಭೈರವರು ಅಂದಕಾಸುರನನ್ನು ಸಂಹಾರ ಮಾಡಿದರು. ನಂತರ ಶಿಷ್ಯರ ಸ್ತುತಿಯನ್ನು ಕೇಳಿ ಶಾಂತರೂಪಿಯಾದನು. ಇಲ್ಲಿ ವ್ಯಕ್ತವಾಗಿರುವ ಕಥೆಯಲ್ಲಿ ಶ್ರೇಷ್ಠತೆಯ ಪ್ರಶ್ನೆಯೇ ಇಲ್ಲ ಅಸುರನೊಂದಿಗೆ ಕಾದಾಡಿ ಅವನ ಗದೆಯ ಏಟಿನಿಂದ ಅಷ್ಟಭೈರವರು ಜನಿಸಿದರು. ಅಷ್ಟಭೈರವನು ಅಂದಕಾಸುರನನ್ನು ವದೆ ಮಾಡಿದನು. ಇಲ್ಲಿ ಅಷ್ಟಭೈರವನ ಜನಕ್ಕೆ ಒಂದು ತಾತ್ವಿಕ ನೆಲಗಟ್ಟನ್ನು ಕಲ್ಪಿಸಲಾಗಿದೆ. ಉಗ್ರ ರೂಪಿಯಾದ ಭೈರವನು ಶಿವನ ಒಂದು ಅಂಗವೇ ಎಂಬುವುದು ಸ್ಪಷ್ಟವಾಗಿದೆ.

## ಆದಿಚುಂಚನಗಿರಿ ಮಹಾತ್ಮೆ

ಚುಂಚನಗಿರಿಯ ಭೈರವ ಅವತಾರವು ಬ್ರಹ್ಮನ ಅಹಂಕಾರದ ದಮನಕ್ಕೆ ಕಾರಣವಾದ ಕಥೆಯು ಇದೇ ರೀತಿಯಲ್ಲಿ ನಿರೂಪಿತವಾಗಿದೆ. ಕೈಲಾಸದಲ್ಲಿ ಶಿವಗಣವು ಧ್ಯಾನದಲ್ಲಿ ಮಗ್ನರಾಗಿರುವಾಗ ಬ್ರಹ್ಮ ಅಲ್ಲಿಗೆ ಬರುತ್ತಾನೆ. ಕೈಲಾಸದ

ಕಾವಲುಗಾರರಾದ ಆಗುನಾಥ ಜೋಗುನಾಥರು ಬ್ರಹ್ಮನನ್ನು ತಡೆದು "ಅಪ್ಪಣೆ ಇಲ್ಲದೆ ಯಾರನ್ನು ಬಿಡುವುದಿಲ್ಲವೆಂದು" ತಿಳಿಸಿದರು. ಕೋಪಗೊಂಡ ಬ್ರಹ್ಮ ಅವರಿಬ್ಬರನ್ನು ಕತ್ತರಿಸಿ ಶಿವಗಣದೊಳಗೆ ಪ್ರವೇಶಿಸಿದನು. ಧ್ಯಾನ ಮಗ್ನರಾದ ಶಿವ, ಶಿವಗಣ ಸಮೂಹವು ಬ್ರಹ್ಮನ ಬರುವಿಕೆ ತಿಳಿಯದೆ ಕುಳಿತಿರಲು, ಕೋಪಗೊಂಡ ಬ್ರಹ್ಮ ಮುಂದೆ ಬಂದು "ಮೂರು ಲೋಕಗಳನ್ನು, ಮುಕ್ಕೋಟಿ ದೇವತೆಗಳನ್ನು, ಇರುವ ಸಕಲ ಜೀವರಾಶಿಗಳನ್ನು ಸೃಷ್ಟಿಸಿರುವ ನನ್ನನ್ನು ಯಾರೂ ನಮಸ್ಕರಿಸಲಿಲ್ಲ ಗೌರವಿಸಲಿಲ್ಲವೆಂದು ನಿಮ್ಮ ಅಹಂಕಾರವನ್ನು ಅಡಗಿಸದೆ ಬಿಡೆನು" ಎಂದು ಆರ್ಭಟಿಸಿದನು. ಮುಂದುವರೆದು ಶಿವ ಧ್ಯಾನದಲ್ಲಿರುವಾಗ ಶಿರಕ್ಕೆ ಕೈ ಹಾಕಲು ಮುಂದಾದಾಗ ಯೋಗ ಮಗ್ನನಾದ ಶಿವ ಎಚ್ಚರಗೊಂಡು ತನ್ನ ಚುಳ್ಳುಗುರಿನಿಂದ ಬ್ರಹ್ಮನ ಶಿರವನ್ನು ಚಿವುಟಿ ಹಾಕುತ್ತಾನೆ. ಬ್ರಹ್ಮನ ನೀತಿ ಮರೆತ ವರ್ತನೆ ಶಿರ ಛೇದಕ್ಕೆ ಕಾರಣವಾಯಿತು. ಇಲ್ಲಿ ಭೈರವನ ಸೃಷ್ಟಿಯ ಬದಲು ಶಿವನೇ ಬ್ರಹ್ಮನನ್ನು ಶಿರವನ್ನು ತನ್ನ ಕಿರುಬೆರಳಿನಿಂದ ಕತ್ತರಿಸಿದ್ದಾನೆ. ಈ ವ್ಯತ್ಯಾಸವು ಶಿವನಿಂದಲೇ ಬ್ರಹ್ಮನ ಅಹಂಕಾರದ ಅಂತ್ಯವಾಯಿತು ಎಂದು ಬಿಂಬಿಸಲು ಈ ಬದಲಾವಣೆಗಳಾಗಿರಬೇಕು.

ಬ್ರಹ್ಮ ಹತ್ಯಾ ದೋಷದಿಂದ ಶಿವನ ಕೈಯನ್ನು ಬ್ರಹ್ಮ ಕಪಾಲ ಬಿಡಲಿಲ್ಲ. ಅದರಿಂದ ಬಿಡಿಸಲು ಹೋದರೆ ತಡೆಯಲಾರದ ಯಾತನೆ ಶಿವನನ್ನು ಕಾಡಿತು. ಶಿವನ ಕೋಪದಿಂದ ಉಂಟಾದ ಕೃತ್ಯಕ್ಕೆ ಪರಿಹಾರವಾಗಿ ಶಿವ ಭೈರವ ರೂಪ ತಾಳಿ ಕಾವಲುಗಾರರಾದ ಆಗುನಾಥ ತೊಡೆ ಮೂಳೆ ಕತ್ತರಿಸಿ ಕಿನ್ನುಡಿಯುಳವ ಮಾಡಿ, ತಲೆ ಬುರುಡೆ ಕತ್ತರಿಸಿ ಕಿನ್ನುಡಿ ಬುರುಡೆ ಮಾಡಿಕೊಂಡು, ಹೆಬ್ಬೆರಳು ಕತ್ತರಿಸಿ ಕಿನ್ನುಡಿ ಮೆಟ್ಟಿಲು ಮಾಡಿ, ಬೆನ್ನುರಿ ನರಕಿತ್ತು ತಂತಿಯ ಮಾಡಿ, ಬ್ರಹ್ಮ ಹತ್ಯಾ ದೋಷದಿಂದ ಮುಕ್ತನಾಗಲು ಭೂಲೋಕಕ್ಕೆ ಬರುತ್ತಾನೆ. ಇಲ್ಲಿ ಬ್ರಹ್ಮನ ತಲೆ ಕತ್ತರಿಸುವವನು ಭೈರವನಲ್ಲ ಶಿವ. ಶಿವ ಭೈರವ ರೂಪ ತಾಳಿ ಭೂಲೋಕಕ್ಕೆ ಬರುವ ರೀತಿ ಭಿನ್ನವಾಗಿ ಹೇಳಲಾಗಿದೆ. ಹಾಗೆಯೇ ಭೂಲೋಕವು ಪಾಪ ಪರಿಹಾರದ ಕೇಂದ್ರವಾಗಿದೆ. ಆದರೆ ಭೂಲೋಕದಲ್ಲಿರುವ ಮನುಷ್ಯ ಅರಿಯದೆ ವರ್ತಿಸುತ್ತಿರುವುದು ಅವರ ಅಲ್ಪಜ್ಞಾನವನ್ನು ತೋರಿಸುತ್ತದೆ.

ಭೈರವನ ಅವತಾರದ ಶಿವ ಚುಂಚನಗಿರಿಯ ವನಸಿರಿಯನ್ನು ಕಂಡು ಬೆರಗುಗೊಂಡು ಅಲ್ಲಿಯೇ ನೆಲೆಸುದಾಗಿ ನಿರ್ಧರಿಸಿದನು. ಭೈರವನಿಗೆ ಆ ಸಂದರ್ಭದಲ್ಲಿ ಕಪಾಲದಿಂದ ಅನುಭವಕ್ಕೆ ಬರುತ್ತಿದ್ದ ಯಾತನೆ ತಡೆಯಲು ಅಸಾಧ್ಯವಾಗಿತ್ತು. ಕಪಾಲದಿಂದ ಬರುತ್ತಿದ್ದ ರಕ್ತದ ನದಿಯಲ್ಲಿ ಭೈರವನ ಬೆವರ ಹನಿಯು ಸೇರಿ 9 ಹನಿಗಳಿಂದ 9 ಮೀನುಗಳು ಉದಯವಾದವು. ಮುಂದೆ ಈ ಮೀನುಗಳೇ ನವನಾಥರಾದರು ಎಂಬ ನಂಬಿಕೆ ಇದೆ. ಕಪಾಲದ ನೋವಿನಿಂದ ಬಂಗಿ ಸೇದಲು ಭೈರವ ಮುಂದಾದನು. ಬಂಗಿಯ ಉಗೆಯು ಆಕಾಶದ ತುಂಬೆಲ್ಲ ಹರಡಿತು. ಕಾರುಬೈಲಿನ ಗೊಲ್ಲ ಬೊಮ್ಮರಸನೆಂಬುವವನ ಏಳು ಜನ ಹೆಣ್ಣು ಮಕ್ಕಳು ಅದೇ ದಾರಿಯಲ್ಲಿ ನಡೆದು ಬರುತ್ತಿದ್ದರು. ಬಂಗಿ ಹೊಗೆಯನ್ನು ಲಕ್ಷ್ಮೀದೇವಿಯು ಸೇವಿಸಿದ್ದರಿಂದ ಗರ್ಭ ಧರಿಸಿದಳು. ಹಿರಿಯ ಮಗಳಾದ ಗಂಗೆಮಾಳಿಗೆ ಈ ವಿಷಯ ತಿಳಿಯಿತು ಇದಕ್ಕೆ ಕಾರಣರಾದವರಲ್ಲಿಗೆ ನೀನು ಹೋಗು ಎಂದು ಲಕ್ಷ್ಮಿ ದೇವಿಯನ್ನು ಅಲ್ಲೇ ಬಿಟ್ಟು ಮುಂದೆ ಹೊರಟಳು. ಲಕ್ಷ್ಮಿದೇವಿಯು ತನಗಾದ ಗತಿಯನ್ನು ನೆನೆದು ಕೆಲಕಾಲ ದುಃಖಿಸಿ ನಂತರ ಮನವನ್ನು ಸಂತಹಿಸಿಕೊಂಡು, ಇದಕ್ಕೆ ಕಾರಣರಾದವರನ್ನು ಹುಡುಕಲು ಹೊರಟಳು. ಮನೆಗೆ ತೆರಳಿ ಸೀರೆ, ರಾಜ ಮುತ್ತಿನರವಕೆ, ಬಳೆ, ಬಂಗಾರಗಳನ್ನು ತೊಟ್ಟು ಅರಸನನ್ನು ಹುಡುಕಲು ಹೊರಟಳು.

ಗಿರಿಯ ಎಲ್ಲಾ ತಿರುಗಿ ನೋಡಿದಾಗ ಭೈರವನನ್ನು ಕಂಡ ಲಕ್ಷ್ಮಿ ದೇವಿ ಹರ್ಷಿತಳಾಗಿ ಅವನೊಂದಿಗೆ ಮಾತನಾಡಲು ಮುಂದಾಗುವಳು. ಬಂಗಿ ಅಮಲಿನಲಿ ಮಲಗಿದ್ದ ಭೈರವ ಅವಳನ್ನು ತಿರುಗಿಯೂ ನೋಡಲಿಲ್ಲ. ಮೊದಲು ಮುನಿದ ಲಕ್ಷ್ಮೀದೇವಿಯು ನಂತರ ಶಿವನೊಂದಿಗೆ ಸಂವಹನಕ್ಕೆ ಮುಂದಾಗುವಳು. ಭೈರವನನ ನಿದ್ರೆ ಹಾಳು ಮಾಡಿದ ಲಕ್ಷ್ಮಿ ದೇವಿಯನ್ನು ನೋಡಿದ ಶಿವ ನೀನು ಯಾರು? ಎಂದು ಹೇಳಿದಾಗ ನಡೆದ ಸಂಗತಿಯನ್ನೆಲ್ಲ ತಿಳಿಸಿದಳು. ಭೈರವ ಅವಳ ಮಾತನ್ನು ಒಪ್ಪುವುದಿಲ್ಲ ಗರ್ಭಧಾರಣೆಯನ್ನು ಅಪನಂಬಿಕೆಯಿಂದ ನೋಡುವನು.ಕುಪಿತಳಾದ ಲಕ್ಷ್ಮಿ ದೇವಿ ತನ್ನ ಅಣ್ಣ ಚುಂಚನ ಸಹಾಯವನ್ನು ಬೇಡುವಳು.ಚುಂಚ ಭೈರವನನ್ನ ಸಂಧಿಸಿ ತನ್ನ ತಂಗಿಯನ್ನು ವರಿಸುವಂತೆ ಕೇಳುವನು. ಭೈರವ ಒಪ್ಪದಿರಲು ತನ್ನ ಕೊಂಬುಗಳಿಂದ ತಿವಿಯಲು ಪ್ರಯತ್ನಿಸುವನು. ಆ ಕೊಂಬುಗಳನ್ನೇ ಭೈರವ ಮುರಿದನು. ತಲ್ಲಣಕ್ಕೆ ಒಳಗಾದ ಚುಂಚ ನಿಜವಾಗಿಯೂ ಮಹಾಪುರುಷನಾಗಿರಬೇಕು ಎಂದು ಎಣಿಸಿದನು. ಅಷ್ಟರಲ್ಲಿಯೇ ಈ ಯೋಗಿನಾಥ ಭೈರವ ಎಂಬುದು ಚುಂಚನಿಗೆ ಪ್ರಕಟವಾಯಿತು ಭಕ್ತಿಯಿಂದ ವಂದಿಸಿದನು.

ಚುಂಚ ಶ್ವಾನನ ಅವತಾರ ತಾಳಿ ಭೈರವನ ಕೈಯಲ್ಲಿರುವ ಕಪಾಲವನ್ನು ಮುಟ್ಟಲು ಮುಂದಾದಾಗ ಬ್ರಹ್ಮ ತನ್ನ ಶಿರ ಶ್ವಾನ ಮುಟ್ಟಿದರೆ ಮೈಲಿಗೆಯಾಗುವುದು ಎಂದು ಯೋಚಿಸಿ ಶಿವನ ಕೈಯಲ್ಲಿದ್ದ ಕಪಾಲ ನೆಲಕ್ಕುರುಳಿ ದೂರ ಬಿದ್ದಿತು. ಕಪಾಲ ಯಾತನೆಯು ಅಂತ್ಯವಾಯಿತು ಪ್ರಸನ್ನನಾದ ಭೈರವ ಮೂರು ವರಗಳನ್ನು ಕೇಳಲು ತಿಳಿಸಿದನು.ಮೊದಲನೆಯ ವರ ಈ ಬೆಟ್ಟದಲ್ಲಿ ನೆಲೆಸಬೇಕು. ಎರಡನೆಯ ವರ ತನ್ನ ತಂಗಿಯನ್ನು ವಿವಾಹವಾಗಬೇಕು. ಮೂರನೆಯ ವರ ತನ್ನನ್ನು ವಾಹನವಾಗಿ ಮಾಡಿಕೊಳ್ಳಬೇಕು ಎಂಬುದಾಗಿ ವಿನಯದಿಂದ ಬೇಡಿದನು. ಎಲ್ಲದಕ್ಕೂ ಭೈರವ ಒಪ್ಪಿಕೊಂಡನು. ಅಂದಿನಿಂದ ಚುಂಚನಗಿರಿಯಲ್ಲಿ ಭೈರವ ನೆಲಸಿ ಶ್ವಾನನಾದ ಚುಂಚನನ್ನು ವಾಹನನಾಗಿ ಮಾಡಿಕೊಂಡು ಲಕ್ಷ್ಮಿ ದೇವಿಯನ್ನು ವಿವಾಹದನು. ಈ ಕಥೆಯಲ್ಲಿಯೂ ಬ್ರಹ್ಮನ ಅಹಂಕಾರವನ್ನು ಮುರಿಯೋದಾಗಿದೆ. ಆದರೆ ಶಿವನೇ ತನ್ನ ಉಗುರಿನಿಂದ ಬ್ರಹ್ಮನ ಶಿರವನ್ನು ಕತ್ತರಿಸುವುದು ಭಿನ್ನವಾಗಿದೆ. ಬ್ರಹ್ಮ ಹತ್ಯಾ ದೋಷದ ವಿಮೋಚನೆಗೆ ಭೈರವನ ರೂಪ ತಾಳಿ ಭೂಲೋಕಕ್ಕೆ ಬರುವ ರೀತಿಯು ಹೊಸತನದ ಚಿಂತನೆಯಾಗಿದೆ. ಲಕ್ಷ್ಮಿ ದೇವಿಯ ಉಳಿದ ಅಕ್ಕ ತಂಗಿಯರು ಮಾತ್ರ ಕನ್ನೆಯರಾಗಿ ಉಳಿಯುವುದು ಪೂರ್ವ ನಿಯೋಜಿತವಾಗಿರಬೇಕು. ಲಕ್ಷ್ಮೀದೇವಿ ಪಾರ್ವತಿಯ ಅವತಾರವಿರಬೇಕು. ಕಪಾಲಮೋಕ್ಷವು ಶ್ವಾನವು ಮುಟ್ಟಿದರೆ ಅಪವಿತ್ರವಾಗುತ್ತದೆ ಎಂಬುದು ವೈದಿಕ ಧರ್ಮದ ಮಡಿ ಮೈಲಿಗೆಯ ಪ್ರತೀಕವಾಗಿದೆ. ವೈದಿಕ ಧರ್ಮದ ಪ್ರತಿನಿಧಿಯಾಗಿ ಬ್ರಹ್ಮ ಕಾಣಿಸಿಕೊಂಡಿದ್ದಾರೆ. ಮಡಿಯ ನೆಪದಿಂದ ತನ್ನ ಕಪಾಲವೂ ಬೀಳುವಂತೆ ಬ್ರಹ್ಮ ಮಾಡುತ್ತಾನೆ. ಇಲ್ಲಿಗೆ ಭೈರವ ಬ್ರಹ್ಮ ಹತ್ಯ ದೋಷದಿಂದ ಮುಕ್ತನಾಗಿ ದುಷ್ಟ ಸಂಹಾರಕ್ಕಾಗಿ, ಕಾಲ ಅಧಿಪತಿಯಾಗಿ ನೆಲೆಸುತ್ತಾನೆ.

ಈ ಪುರಾಣಗಳಲ್ಲಿಯೂ ಕೆಲವೊಂದು ಭಿನ್ನತೆಯನ್ನು ಕಾಣಬಹುದು. ಸ್ಥಳ ವಿಚಾರಕ್ಕೆ ಬಂದರೆ ಈ ಪುರಾಣಗಳಲ್ಲಿರುವಂತಹ ಕಥಾಪ್ರಸಂಗಗಳು ದೇವಲೋಕದಲ್ಲಿಯೂ ಮೇರು ಪರ್ವತ, ಶಿವಗಣ ಸಮೂಹವಿರುವ ಕೈಲಾಸ ಈ ಸ್ಥಳಗಳಲ್ಲಿ ಈ ಪುರಾಣದ ಸಂಗತಿಗಳು ನಡೆಯಿತು ಎಂದು ನಿರೂಪಿಸಲಾಗಿದೆ. ಆದರೆ ಶಿವ ರಹಸ್ಯ ಎಂಬ ಪುರಾಣದಲ್ಲಿ ಕಾಶಿಯಲ್ಲಿ ನಡೆಯಿತು ಎಂಬುದಾಗಿ ತಿಳಿಸಲಾಗಿದೆ. ನಿರೂಪಕರಲ್ಲಿ ವ್ಯತ್ಯಾಸವನ್ನು ಕಾಣಬಹುದು ಕೆಲವು ಪುರಾಣಗಳಲ್ಲಿ ಶಂಕರ ಅಥವಾ ಪರಶಿವನೆ ಭೈರವನಾಗಿ ಹೇಳಿದರೆ, ಕೆಲವೊಂದು

ಪುರಾಣಗಳಲ್ಲಿ ಸಮೀಪವರ್ತಿಗಳಾದ ನಂಬಿಕೇಶ್ವರನು ಹಾಗೆಯೇ ಮುನಿಯು ಋಷಿಗಳಿಗೆ ಹೇಳುವ ಪುರಾಣದ ಕಥೆಯಂತೆ ನಿರೂಪಿತವಾಗಿದೆ. ಕಥೆಯ ಹಂದರದಲ್ಲೂ ಕೆಲವೊಂದು ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ ಶಿವಪುರಾಣ, ಶಂಕರ ಸಂಹಿತೆ, ಶಿವರಹಸ್ಯ ಮತ್ತು ಸ್ಕಂದ ಪುರಾಣಗಳಲ್ಲಿ ಶಿವಪುರಾಣದ ಶತರುದ್ರ ಸಂಹಿತೆ, ಚುಂಚನಗಿರಿಯ ಮಹಾತ್ಮೆ ಈ ಎಲ್ಲಾ ಪುರಾಣ ನಿರೂಪಣೆಗಳಲ್ಲಿಯೂ ಒಂದೇ ಆಶಯ. ಅದೇ ಅಂಧಕಾರದ ಅಜ್ಞಾನದ ಅಂತ್ಯಕ್ಕೆ ಉದಯವಾದವನೇ ಭೈರವ. ಭವಿಷ್ಯ ಮಹಾಪುರಾಣ ಮತ್ತು ವಾಮನ ಪುರಾಣದ ಕಥೆಯ ವಿಷಯ ವಸ್ತು ಬದಲಾಗಿರುವುದನ್ನು ಕಾಣಬಹುದು. ಭವಿಷ್ಯ ಪುರಾಣದಲ್ಲಿ ಶಾರದೆಯ ಮೇಲೆ ಮೋಹಗೊಂಡ ಬ್ರಹ್ಮನ ಶಿರ ಛೇದವಾಗುತ್ತದೆ. ಇಲ್ಲಿ ಶಾರದೆಯನ್ನು ಮೋಹಿಸಿದ ದುಷ್ಕೃತ್ಯದಿಂದ ಬ್ರಹ್ಮನ ಶಿಕ್ಷಿತನಾಗುತ್ತಾನೆ ಹೊರತು ಶಿವ ನಿಂದನೆಯಿಂದಲ್ಲ. ಈ ಪುರಾಣ ಕಥೆಗಿಂತಲೂ ವಿಶೇಷವಾಗಿ ನಿರೂಪಿತರವಾಗಿರುವ ಕಥೆ ವಾಮನ ಪುರಾಣ. ಇಲ್ಲಿ ಅಂದಕಾಸುರನ ವಧೆಯ ಅಂತ್ಯಕ್ಕಾಗಿ ಭೈರವ ಉತ್ಪತಿಯಾಗುವನು. ಹಾಗೆಯೇ ಅಷ್ಟಭೈರವರ ಪರಿಕಲ್ಪನೆಯು ಇದರಲ್ಲಿ ಸ್ಪಷ್ಟವಾಗಿದೆ. ಶಿವನ ಅಂಗಗಳಿಂದ ಅಷ್ಟಭೈರವನ ಜನನವಾಯಿತೆಂಬುದು ತಿಳಿಸುತ್ತದೆ. ಒಟ್ಟಿನಲ್ಲಿ ಭೈರವನ ಜನನವು ದುಷ್ಟರ ಅಂತ್ಯ, ಅಂಧಕಾರದ ಮಂದಸ್ಮಿತ ಬೆಳಕಾಗಿದೆ.

ಶಿವನ ಅವತಾರಗಳ ಬಗ್ಗೆ ಮಹಿಮಾತ್ಮಕವಾಗಿ ಚಿತ್ರಿಸಿರುವ ಈ ಪುರಾಣಗಳಲ್ಲಿ ಧ್ವನಿಸಿರುವ ಅಂಶಗಳೆಂದರೆ ಶಿವ ಮತ್ತು ಭೈರವರಲ್ಲಿ ಅಭೇದ ಕಲ್ಪನೆ. ಎರಡನೆಯದು ಅಹಂಕಾರದಿಂದ ಅಜ್ಞಾನದಿಂದ ನಡೆದುಕೊಳ್ಳುವವರು ಬ್ರಹ್ಮನಿಗೆ ಎದುರಾದ ದುಸ್ಥಿತಿ

ಯನ್ನೇ ಅನುಭವಿಸಬೇಕಾಗುತ್ತದೆ. ಭೈರವನ ಮಹಿಮೆಯ ವೈಭವಿಕರಣ ನಡೆದಿದೆ. ಭೈರವನ ಅವತಾರದ ಅರ್ಥ ಮನನವಾಗುತ್ತದೆ.ದುಷ್ಟರ ಗರ್ವವನ್ನು ಅಡಗಿಸಿ ಶಿಷ್ಟರನ್ನು ಪೊರೆಯುವ ಉದಾರ ಯೋಗಿಯಾಗಿ ಕಂಡು ಬರುತ್ತಾನೆ. ಮೇಲು ನೋಟಕ್ಕೆ ಈ ಅಂಶಗಳು ಕಂಡು ಬಂದರೆ ಒಳ ಒಳಹೊಕ್ಕಿ ನೋಡಿದರೆ ಧರ್ಮ ಸಂಘರ್ಷದ ದಟ್ಟವಾದ ಮಂಜು ಅಡಗಿದೆ. ವೈದಿಕ ಧರ್ಮದ ಜನಪ್ರಿಯತೆಯೊಂದಿಗೆ ಶೈವ ಧರ್ಮದ ಸೆಣೆಸಾಟ ಪರಿಹಾರಾರ್ಥವಾಗಿ ಸಂಘರ್ಷ ತದನಂತರ ಸಂಧಾನ, ವಿಜಯದ ಸಾಧನೆಯನ್ನು ಬಿಂಬಿಸಲಾಗಿದೆ.

## ಆಕರ ಗ್ರಂಥಗಳು


1. ಡಾ. ಹಾ ಮಾ ನಾಯಕ, ಜಾನಪದ ಸ್ವರೂಪ, ಪ್ರಕಾಶಕರು- ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, 1971 .
2. ಪ್ರೊ. ಕೆಎನ್. ಗಂಗಾನಾಯಕ್ (ಪ್ರಧಾನ ಸಂಪಾದಕರು) ಡಾ. ಗೌರೀಶ ಪಿ. (ಸಂಪಾದಕರು), ಜಾನಪದ ಕುವೆಂಪು, ಪ್ರಕಾಶಕರು- ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2011.
3. ಪ್ರೊ. ಕೆ.ಎನ್. ಗಂಗಾನಾಯಕ (ಪ್ರಧಾನ ಸಂಪಾದಕರು), ಡಾ. ಜಯಲಕ್ಷ್ಮಿ ಸೀತಾಪುರ (ಸಂಪಾದಕರು), ಕನ್ನಡ ಜಾನಪದ, ಪ್ರಕಾಶಕರು- ಕನ್ನಡ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2011.
4. ಕೆ ರಾಜೇಶ್ವರಿಗೌಡ, ಆದಿಚುಂಚನಗಿರಿ ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಕಾಶಕರು- ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ, ಮಂಡ್ಯ ಜಿಲ್ಲೆ, 2001.